ಅರ್ಜಿಯನ್ನು ಒಪ್ಪಿಸುವುದು

ಶ್ರೀ ಮಲ್ಲಪರಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ತೆಲಸಂಗ ಗ್ರಾಮದ ಸರ್ವೆ ನಂ. ೮೫೫ರಲ್ಲಿ ಗಾಡಿ ರಸ್ತೆ ನಿರ್ಮಾಣದ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.

ಚುನಾವಣಾ ಪ್ರಸ್ತಾವಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ ೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೨೧(೧)(೧೪)ನೇ ಕಲಮಿನ ಮೇರೆಗೆ ಆವಶ್ಯಕವಡಿಸಿರುವಂತೆ ವಿಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಸದಸ್ಯರುಗಳನ್ನು ಚುನಾಯಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,—

"೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೨೧(೧)(೧೪)ನೇ ಕಲಮಿನ ಮೇರೆಗೆ ಆವಶ್ಯಕವಡಿಸಿರುವಂತೆ ವಿಕಲ ಸಂಕ್ರಮಣೀಯ ಮತದ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಸದಸ್ಯರುಗಳನ್ನು ಚುನಾಯಿಸುವುದು."

ಪ್ರಸ್ತಾವ ಅಂಗೀಕೃತವಾಗಿದೆ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ,

"೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೨೧(೧)(೧೪)ನೇ ಕಲಮಿನ ಮೇರೆಗೆ ಆವಶ್ಯಕವಡಿಸಿರುವಂತೆ ವಿಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಸದಸ್ಯರುಗಳನ್ನು ಚುನಾಯಿಸಬೇಕು."

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,—

"೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೨೧(೧)(೧೪)ನೇ ಕಲಮಿನ ಮೇರೆಗೆ ಆವಶ್ಯಕವಡಿಸಿರುವಂತೆ ವಿಕಲ ಸಂಕ್ರಮಣೀಯ ಮತದ ಮೂಲಕಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಸದಸ್ಯರುಗಳನ್ನು ಚುನಾಯಿಸುವುದು."

ಪ್ರಸ್ತಾವ ಅಂಗೀಕೃತವಾಗಿದೆ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ,—

"೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೨೧(೧)(೧೪)ನೇ ಕಲಮಿನ ಮೇರೆಗೆ ಆವಶ್ಯಕವಡಿಸಿರುವಂತೆ ವಿಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಸದಸ್ಯರುಗಳನ್ನು ಚುನಾಯಿಸಬೇಕು."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

''೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೨೧(೧)(೧೪)ನೇ ಕಲಮಿನ ಮೇರೆಗೆ ಅಪೇಕ್ಷಿಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಪೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಸದಸ್ಯರುಗಳನ್ನು ಚುನಾಯಿಸುವುದು.''

ಪ್ರಸ್ತಾವ ಅಂಗೀಕೃತವಾಗಿದೆ

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

೩೧-೧-೮೭ರಂದು ಜಿಲ್ಲಾ ಪರಿಷತ್ ಮತ್ತು ಮಂಡಲ ಸದಸ್ಯರ ಸಮ್ಮೇಳನದಂದು ರಾಷ್ಟ್ರಪಿತ ಮಾತ್ಮತರ ನಾಯಕರ ಭಿತ್ತಿಚಿತ್ರಗಳನ್ನು ಕೆಡವಿಸಿ ಅಗೌರವ ತೋರಿಸಿರುವ ಬಗ್ಗೆ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ನಾವು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳಿಸಿದ್ದೇವೆ. ಜನವರಿ ೩೧ನೇ ತಾರೀಖಿನ ದಿವಸ ಭಾರತದಲ್ಲಿ ವಾಸವಾಗಿರತಕ್ಕಂಥ ಪ್ರತಿಯೊಬ್ಬ ಪ್ರಜೆಗೂ ಆದರಲ್ಲೂ ಕರ್ನಾಟಕದಲ್ಲಿ ವಾಸವಾಗಿರ ತಕ್ಕಂಥ ಪ್ರತಿಯೊಬ್ಬ ಮನುಷ್ಯರಿಗೂ ಹೆಂಗಸರಿಗೂ, ಗಂಡಸರಿಗೂ, ಎಲ್ಲರಿಗೂ ಮಾನ ಹೋಗ ತಕ್ಕಂಥ, ಅವಹೇಳನವಾಗುವಂಥ ಕೃತ್ಯ ನಡೆದಿದೆ. ಅದನ್ನು ಹೇಗೆ ಹೇಳಬೇಕು ಎನ್ನುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ, ಸಮಸ್ಯೆಯಲ್ಲ ಮನಸ್ಸಿಗೆ ಬಹಳ ನೋವಾಗಿದೆ. ೩೧ನೇ ತಾರೀಖಿನ ದಿವಸ ಏನಾಗಿದೆ ಎಂದರೆ ನಮ್ಮ ಕರ್ನಾಟಕದಲ್ಲಿ ಅಂದರೆ ಇಲ್ಲಿ ಒಂದು ದೊಡ್ಡ ಸಮ್ಮೇಳನ ನಡೆಯ ಬೇಕು ಎಂದು ಸರ್ಕಾರದವರು ಮಂಡಲ್ ಪಂಚಾಯಿತಿ, ಜಿಲ್ಲಾ ಪರಿಷತ್‌ಗಳಿಗೆ ಚುನಾಯಿತರಾಗಿದ್ದ ಪ್ರತಿನಿಧಿಗಳನ್ನೆಲ್ಲಾ ಕರೆಸಿದ ಮೇಳ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ನಮ್ಮ ನಾಯಕರು, ನಮ್ಮ ರಾಷ್ಟ್ರಪಿತ ಗಾಂಧೀಜಿಯವರ ಕೆಲವು ಪೋರ್‌ಟ್ರೇಟ್ಸ್ ಹಾಗೂ ಜವಹರಲಾಲ್ ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿಯವರ, ಶ್ರೀಮತಿ ಇಂದಿರಾಗಾಂಧಿಯವರ ಹಾಗೂ ರಾಜೀವ್ ಗಾಂಧಿಯವರ ಚಿತ್ರಗಳನ್ನು ಪ್ಯಾಲೆಸ್ ಎದುರುಗಡೆ ಟ್ರೇಡ್‌ವೆಲ್ ಸರ್ವೀಸ್‌ನಿಂದ ಹಾಕತಕ್ಕಂಥ ಅಡ್ವರ್‌ಟೈಸ್‌ಮೆಂಟಿನ ಒಂದು ಬೋರ್ಡಿನಲ್ಲಿ ಕೆಲವರೆಲ್ಲಾ ಅಂಟಿಸಿದರು. ದೊಡ್ಡ ದೊಡ್ಡ ಚಿತ್ರಗಳನ್ನು, ಲೈಫ್ ಸೈಸ್ ಚಿತ್ರಗಳನ್ನು ಅಂಟಿಸಿದರು. ಅದನ್ನು ಟ್ರೇಡ್‌ವೆಲ್ ಸರ್ವೀಸ್‌ನಿಂದ ಅನುಮತಿ ಪಡೆದು ಅಂಟಿಸಿದರು. ಭಾರತದ ಮಹಾನಾಯಕರ ಚಿತ್ರಗಳನ್ನು ಮೇನ್‌ರೋಡ್‌ನಲ್ಲಿ ಹಾಕಿತ್ತು. ಇವತ್ತು ಎಲ್ಲಾ ನೋಡಿರಬಹುದು. ದಿನಾಂಕ ೧-೨-೮೭ರ ಎಕ್ಸ್‌ಪ್ರೆಸ್‌ನಲ್ಲಿ ಬಂದಿರುವುದನ್ನು ಮತ್ತು ಅದೇ ದಿವಸ ಸಂಯುಕ್ತ ಕರ್ನಾಟಕ ಫೇಪರಿನಲ್ಲಿ ಬಂದಿರತಕ್ಕಂಥ ಚಿತ್ರಗಳನ್ನು ನೋಡಿರಬಹುದು.

೧-೦೦ ಪಿ.ಎಂ.

ಈ ಚಿತ್ರಗಳನ್ನು ನೋಡುವುದಕ್ಕೆ ಬಂದವರು ಸಂತೋಷಪಟ್ಟು ಹೋದವರು ಇದ್ದಾರೆ. ಈ ಚಿತ್ರಗಳ ಕೆಳಗೆ ಕ್ಯಾಪ್ಷನ್ ಕೂಡ ಬರೆಯಲಾಗಿತ್ತು. ಮಹಾತ್ಮ ಗಾಂಧೀಜಿಯವರ ಚಿತ್ರದ ಕೆಳಗೆ ಗ್ರಾಮ ಸ್ವರಾಜ್ಯಕ್ಕಾಗಿ ಶ್ರಮಿಸಿದವರು, ಜವಹರಲಾಲ್ ನೆಹರೂರವರ ಚಿತ್ರದ ಕೆಳಗೆ ಶಾಂತಿ ಧೂತರು, ಲಾಲ್ ಬಹದ್ದೂರ್ ಶಾಸ್ತ್ರಿಯವರ ಚಿತ್ರದ ಕೆಳಗೆ ಜೈಕಿಸಾನ್, ಶ್ರೀಮತಿ ಇಂದಿರಾಗಾಂಧಿಯವರ ಚಿತ್ರದ ಕೆಳಗೆ ಬಡತನದ ನಿರ್ಮೂಲನೆಗಾಗಿ ಪ್ರಾಣಾರ್ಪಣೆ ಮಾಡಿದವರು, ರಾಜೀವ್‌ಗಾಂಧಿಯವರ ಚಿತ್ರದ ಕೆಳಗೆ ರಾಷ್ಟ್ರದ ಸಂಪನ್ಮೂಲಗಳ ಅಭಿವೃದ್ಧಿಗಾಗಿ ಮತ್ತು ಗ್ರಾಮಾಭಿವೃದ್ಧಿಗಾಗಿ ದುಡಿಯುತ್ತಿರುವವರು ಎಂದು ಬರೆಯಲಾಗಿದೆ. ಇದನ್ನು ಯಾರೋ ಪುಣ್ಯಾತ್ಮರು ನೋಡಿದವರು ಪತ್ರಿಕೆಯಲ್ಲಿ ತಿಳಿದುಬಂದಿರುವ ಪ್ರಕಾರ ಚಿತಾವಣೆ ಮಾಡಿದ್ದಾರೆ. ಪತ್ರಿಕೆಯಲ್ಲಿ